# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **:** | **91** |
| **ಸದಸ್ಯರ ಹೆಸರು** | **:** | **ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು)** |
| **ಉತ್ತರಿಸುವ ದಿನಾಂಕ** | **:** | **15.07.2024** |
| **ಉತ್ತರಿಸುವವರು** | **:** | **ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಗ್ರಾಮ ಅರಣ್ಯ ಸಮಿತಿ VFC ಮತ್ತು ಪಂಚಾಯತ್ ಜೀವ ವೈವಿದ್ಯ ಸಮಿತಿಗಳಿಗೆ ಜೀವ ತುಂಬುವ ಉದ್ದೇಶ ಅರಣ್ಯ ಇಲಾಖೆಗೆ ಇದೆಯೇ; ಹಾಗಿದ್ದಲ್ಲಿ, ಯಾವಾಗಿನಿಂದ ಪ್ರಾರಂಭಿಸಲಾಗುವುದು; | ಗ್ರಾಮ ಅರಣ್ಯ ಸಮಿತಿ (VFC) ಗಳಿಗೆ ಜೀವ ತುಂಬುವ ಉದ್ದೇಶ ಅರಣ್ಯ ಇಲಾಖೆಗೆ ಇರುತ್ತದೆ.<br><br>ಗ್ರಾಮ ಅರಣ್ಯ ಸಮಿತಿಗಳ ಪುನಃಶ್ಚೇತನಕ್ಕಾಗಿ ವೃತ್ತಾಧಿಕಾರಿಗಳಿಗೆ ಪ್ರಸ್ತಾವನೆ ಹಾಗೂ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸಲು ಸೂಚಿಸಲಾಗಿರುತ್ತದೆ. ವೃತ್ತಾಧಿಕಾರಿಗಳಿಂದ ಪ್ರಸ್ತಾವನೆ ಪಡೆದುಕೊಂಡು ಕ್ರೋಢೀಕೃತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು.<br><br>ಪ್ರಸ್ತುತ ಗ್ರಾಮ ಅರಣ್ಯ ಸಮಿತಿಗಳ ಪುನಃಶ್ಚೇತನ ಕಾರ್ಯಕ್ರಮಕ್ಕಾಗಿ ಯಾವುದೇ ಅನುದಾನವನ್ನು ಸರ್ಕಾರವು ಒದಗಿಸಿರುವುದಿಲ್ಲ.<br><br>**ಕರ್ನಾಟಕ ಜೀವವೈವಿಧ್ಯ ಮಂಡಳಿಯ ಉತ್ತರ**<br><br>• ಜೈವಿಕ ವೈವಿಧ್ಯ ಕಾಯ್ದೆ, 2002ರ ಸೆಕ್ಷನ್ 41(1) ಹಾಗೂ ಕರ್ನಾಟಕ ಜೈವಿಕ ವೈವಿಧ್ಯ ನಿಯಮಗಳು 2005ರ ನಿಯಮ 21 ರನ್ವಯ ಎಲ್ಲಾ 6554 ಸ್ಥಳೀಯ ಸಂಸ್ಥೆಗಳಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ಈಗಾಗಲೇ ರಚಿಸಲಾಗಿದೆ.<br>• ಜೀವವೈವಿಧ್ಯ ನಿರ್ವಹಣಾ ಸಮಿತಿ ವ್ಯಾಪ್ತಿ ಪ್ರದೇಶದಲ್ಲಿ ಜೀವವೈವಿಧ್ಯತೆಯನ್ನು ಸಂರಕ್ಷಿಸುವುದು ಹಾಗೂ ಸ್ಥಳೀಯ ಮಟ್ಟದ ಜೀವವೈವಿಧ್ಯತೆಯ ದಾಖಲಾತಿಗಳನ್ನು ತಯಾರಿಸುವುದು ಸದರಿ ಸಮಿತಿಗಳ ಆದ್ಯ ಕರ್ತವ್ಯವಾಗಿರುತ್ತದೆ.<br>• ಜೈವಿಕವೈವಿಧ್ಯ ಕಾಯ್ದೆಯನ್ನು ಅನುಷ್ಠಾನಗೊಳಿಸಲು ಹಾಗೂ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಬಲವರ್ಧನೆಗೊಳಿಸಲು ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಅಧ್ಯಕ್ಷರುಗಳಿಗೆ/ಸದಸ್ಯರುಗಳಿಗೆ, ಅರಣ್ಯ ಇಲಾಖೆಯ ಅಧಿಕಾರಿಗಳಿಗೆ/ಮುಂಚೂಣಿ ಸಿಬ್ಬಂದಿಗಳಿಗೆ ಹಾಗೂ ಸಮುದಾಯ ಮಟ್ಟದಲ್ಲಿ ಇಲ್ಲಿಯವರೆಗೆ 1151 ತರಬೇತಿ ಕಾರ್ಯಗಾರಗಳನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗಿರುತ್ತದೆ.<br>• ಪ್ರಸ್ತುತ ವರ್ಷದಲ್ಲಿ 30 ತರಬೇತಿ ಕಾರ್ಯಗಾರಗಳನ್ನು ಹಮ್ಮಿಕೊಳ್ಳಲು ಮಂಡಳಿಯು ಕ್ರಿಯಾ ಯೋಜನೆಯನ್ನು ತಯಾರಿಸಿ ತರಬೇತಿಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. |

Behardi

| | | |
|---|---|---|
| | | • ದೇಶದಲ್ಲೇ ಮೊಟ್ಟಮೊದಲ ಬಾರಿಗೆ ಕರ್ನಾಟಕ ರಾಜ್ಯದಲ್ಲಿ ಪ್ರಾಥಮಿಕ ಹಂತವಾಗಿ ಮಾದರಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ಗುರುತಿಸಿ ಅಂತಹ ಸಮಿತಿಗಳು ಇನ್ನೂ ಹೆಚ್ಚಿನ ಮಟ್ಟದಲ್ಲಿ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲು ಅವುಗಳಿಗೆ ತಾಂತ್ರಿಕ ಹಾಗೂ ಆರ್ಥಿಕ ನೆರವನ್ನು ನೀಡಲಾಗುತ್ತಿದೆ. ಮುಂದಿನ ದಿವಸಗಳಲ್ಲಿ ಇನ್ನೂ ಹೆಚ್ಚಿನ ಗುರಿಯನ್ನು ತಲುಪಲಾಗುವುದು.<br>• ಮಂಡಳಿಯಿಂದ ಆರ್‌ಡಿಪಿಆರ್ ಇಲಾಖೆ ಮತ್ತು ಪೌರಾಡಳಿತ ನಿರ್ದೇಶನಾಲಯದಲ್ಲಿ ನೋಡಲ್ ಅಧಿಕಾರಿಗಳ ಮುಖಾಂತರ ಸಮಿತಿಗಳ ಬಲವರ್ಧನೆಗೊಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ. |
| (ಆ) | ಗ್ರಾಮ ಅರಣ್ಯ ಸಮಿತಿಯ ರಚನೆ ಮತ್ತು ಕಾರ್ಯಗಳೇನು? (ವಿವರ ನೀಡುವುದು) | ಗ್ರಾಮ ಅರಣ್ಯ ಸಮಿತಿಯ ರಚನೆ ಮತ್ತು ಕಾರ್ಯಗಳ ಕುರಿತು ಸರ್ಕಾರದ ಆದೇಶ ಸಂಖ್ಯೆ FEE 50 FAP 2000 ದಿನಾಂಕ:19.06.2002 ರಲ್ಲಿ ಕ್ರಮ ಸಂಖ್ಯೆ 6 ರಿಂದ 10 ರವರೆಗೆ ಈ ಕೆಳಕಂಡಂತೆ ಹೊರಡಿಸಿದೆ.<br><br>6. ಗ್ರಾಮ ಅರಣ್ಯ ಸಮಿತಿ (ವಿಎಫ್‌ಸಿ)ಯ ರಚನೆ :<br><br>i. ಜೆಎಫ್‌ಪಿಎಂ ಯೋಜನೆಯಲ್ಲಿ ಪಾಲ್ಗೊಳ್ಳಲು ಆಸಕ್ತಿ ಹೊಂದಿದ ಗ್ರಾಮಸ್ಥರನ್ನು, ಗ್ರಾಮ ಅರಣ್ಯ ಸಮಿತಿಯ ರಚನೆಗೆ ಅನುಕೂಲವಾಗುವಂತೆ ಕೆಲವು ಪ್ರವರ್ತಕರುಗಳನ್ನಾಗಿ ನೇಮಕ ಮಾಡಿಕೊಳ್ಳಬಹುದು.<br><br>ii. ವಲಯ ಅರಣ್ಯಾಧಿಕಾರಿಯು, ಗ್ರಾಮ ಅರಣ್ಯ ಸಮಿತಿಯ(ಗಳ) ನೋಂದಣಿಗಾಗಿ ಪ್ರಸ್ತಾವನೆಗಳನ್ನು ಆ ಸಮಿತಿಯ ಕರ್ತವ್ಯಗಳು, ಹೊಣೆಗಾರಿಕೆಗಳು, ಅಧಿಕಾರಗಳು ಹಾಗೂ ಕ್ಷೇತ್ರ ವ್ಯಾಪ್ತಿಯನ್ನು ನಿರೂಪಿಸುವ ಬೈಲಾಗಳನ್ನು ಯುಕ್ತ ರೀತಿಯಲ್ಲಿ ಒದಗಿಸುವ ಮೂಲಕ ಪ್ರದೇಶಗಳ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಂಬಂಧಪಟ್ಟ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ (ಡಿಸಿಎಫ್) ಸಲ್ಲಿಸಬೇಕು.<br><br>iii. ಎಲ್ಲಾ ಗ್ರಾಮ ಅರಣ್ಯ ಸಮಿತಿಗಳನ್ನು ಜೆಎಫ್‌ಪಿಎಂ ಯೋಜನೆಯಲ್ಲಿ ಅವು ಪಾಲ್ಗೊಳ್ಳುವುದಕ್ಕೆ ಮೊದಲು, ಸಂಬಂಧಪಟ್ಟ ಡಿಸಿಎಫ್ (ಪ್ರಾದೇಶಿಕ) ಅವರು ಕರ್ನಾಟಕ ಅರಣ್ಯ ಅಧಿನಿಯಮದಡಿ ಸಂಘಗಳಾಗಿ ನೋಂದಾಯಿಸತಕ್ಕದ್ದು.<br><br>7. ಗ್ರಾಮ ಅರಣ್ಯ ಸಮಿತಿಯ ಕಾರ್ಯನಿರ್ವಹಣಾ ಸಮಿತಿ :<br><br>ಪ್ರತಿ ನೋಂದಾಯಿತ ಗ್ರಾಮ ಅರಣ್ಯ ಸಮಿತಿಗಾಗಿ ಒಂದು ಕಾರ್ಯ ನಿರ್ವಹಣಾ ಸಮಿತಿಯು ಇರತಕ್ಕದ್ದು ಮತ್ತು ಈ ಸಮಿತಿಯು ಗ್ರಾಮ ಅರಣ್ಯ ಸಮಿತಿಯ ವ್ಯವಹಾರಗಳನ್ನು ನಿರ್ವಹಿಸಬೇಕು. ಪ್ರತಿ ಗ್ರಾಮ ಅರಣ್ಯ ಸಮಿತಿಯ ಕಾರ್ಯನಿರ್ವಹಣಾ ಸಮಿತಿಯು ಈ ಮುಂದಿನವರುಗಳನ್ನು ಒಳಗೊಂಡಿರಬೇಕು :<br><br>i. ಅಧ್ಯಕ್ಷರು : ಸಾಮಾನ್ಯ ಸಭೆಯ ನೋಂದಾಯಿತ ಸದಸ್ಯರುಗಳು ಚುನಾಯಿಸಬೇಕು ಹಾಗೂ ಅವರು ಗ್ರಾಮ ಅರಣ್ಯ ಸಮಿತಿಯ ಸಾಮಾನ್ಯ ನೋಂದಾಯಿತ ಸದಸ್ಯರಾಗಿರಬೇಕು.<br><br>ii. ಅಧ್ಯಕ್ಷರಲ್ಲದೆ, ಈ ಮುಂದೆ ತೋರಿಸಿರುವ 10 ಜನ ಚುನಾಯಿತ ಸದಸ್ಯರು ಮತ್ತು 4 ಜನ ಪದನಿಮಿತ್ತ |

ಸದಸ್ಯರುಗಳೂ ಸೇರಿದಂತೆ 14 ಜನ ಇತರೆ ಸದಸ್ಯರುಗಳಿರುತ್ತಾರೆ :

iii. ಚುನಾಯಿತ ಸದಸ್ಯರುಗಳು - 10

| | | |
|---|---|---|
| ಪರಿಶಿಷ್ಟಜಾತಿ : ಪರಿಶಿಷ್ಟ ಪಂಗಡ | 2 | ಕನಿಷ್ಟ ಒಬ್ಬರು ಮಹಿಳಾ ಸದಸ್ಯರು |
| ಭೂರಹಿತ ಕಾರ್ಮಿಕರು | 2 | ಕನಿಷ್ಟ ಒಬ್ಬರು ಮಹಿಳಾ ಸದಸ್ಯರು |
| ಗ್ರಾಮ ಕುಶಲಕರ್ಮಿಗಳು | 2 | ಕನಿಷ್ಟ ಒಬ್ಬರು ಮಹಿಳಾ ಸದಸ್ಯರು |
| NTFP ಸಂಗ್ರಹಕಾರರು ಸಾಮಾನ್ಯ ವರ್ಗ | 4 | ಕನಿಷ್ಟ ಇಬ್ಬರು ಮಹಿಳಾ ಸದಸ್ಯರು |
| ಒಟ್ಟು | 10 | |

iv. ಪದನಿಮಿತ್ತ ಸದಸ್ಯರುಗಳು - 4 :

| | | |
|---|---|---|
| ಎ | ಗ್ರಾಮ ಲೆಕ್ಕಿಗ | 1 |
| ಬಿ | ಗ್ರಾಮ ಪಂಚಾಯಿತಿ ಕಾರ್ಯದರ್ಶಿ | 1 |
| ಸಿ | ಸರ್ಕಾರೇತರ ಸಂಸ್ಥೆಯ ಪ್ರತಿನಿಧಿ (ಗ್ರಾ.ಅ.ಸ.ಯ ಶಿಫಾರಸ್ಸಿನ ಮೇರೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ನಾಮನಿರ್ದೇಶಿತನಾದ) | 1 |
| ಡಿ | ಸದಸ್ಯ ಕಾರ್ಯದರ್ಶಿ [ವನಪಾಲಕ ಅಥವಾ ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಹೊಂದಿರುವ ಅರಣ್ಯ ರಕ್ಷಕ ಅಥವಾ ಕೃಷಿ ಸಹಾಯಕ (ಅರಣ್ಯೇತರ ಜಮೀನುಗಳ ಸಂಬಂಧದಲ್ಲಿ ಆಧ್ಯತಾನುಸಾರವಾಗಿ)] | 1 |
| | ಒಟ್ಟು | 4 |
| | ಒಟ್ಟು ಸದಸ್ಯರುಗಳು | 14 |

8. ಗ್ರಾಮ ಅರಣ್ಯ ಸಮಿತಿಯ ಕಾರ್ಯನಿರ್ವಹಣಾ ಸಮಿತಿಗೆ ಚುನಾವಣೆ ನಡೆಸುವುದು

ಗ್ರಾಮ ಅರಣ್ಯ ಸಮಿತಿಯ ಕಾರ್ಯನಿರ್ವಹಣಾ ಸಮಿತಿಗೆ ಚುನಾವಣೆಯನ್ನು ನಡೆಸಲು, ಸಂಬಂಧಪಟ್ಟ ಸದಸ್ಯ ಕಾರ್ಯದರ್ಶಿಯವರು, ಸರ್ವ ಸದಸ್ಯರ ಸಭೆಯನ್ನು ಕರೆಯಬೇಕು ಮತ್ತು ಕಂದಾಯ ಇಲಾಖೆಯ ರಾಜಸ್ವ ನಿರೀಕ್ಷಕರು ಅಂತಹ ಸಭೆಯ ಅಧ್ಯಕ್ಷಾಧಿಕಾರಿಯಾಗಿರುತ್ತಾರೆ ಹಾಗೂ ಸದಸ್ಯರನ್ನು ಚುನಾಯಿಸುವುದಕ್ಕಾಗಿ ಸಭೆ ನಡೆಸುತ್ತಾರೆ. ಅಂತಹ ಸಭೆಗಳಿಗಾಗಿ, ಮೊದಲನೆಯ ಸಭೆಗೆ ಶೇಕಡ 50 ಕ್ಕಿಂತ ಹೆಚ್ಚು ನೋಂದಾಯಿತ ಸದಸ್ಯರುಗಳ ಮತ್ತು ಮುಂದೂಡಲಾದ : ತರುವಾಯದ ಸಭೆಯಲ್ಲಿ ಶೇಕಡ 25 ರಷ್ಟು ನೋಂದಾಯಿತ ಸದಸ್ಯರುಗಳ ಕೋರಂ ಇರಬೇಕು.

9. ಪ್ರವರ್ತಕರ ಸಮಿತಿ ವಿಸರ್ಜನೆ

ಚುನಾವಣೆಗಳು ಮುಕ್ತಾಯಗೊಂಡು, ಗ್ರಾಮ ಅರಣ್ಯ ಸಮಿತಿಯು ರಚನೆಯಾಗಿದ್ದಲ್ಲಿ, ಪ್ರವರ್ತಕರ ಸಮಿತಿ ಏನಾದರೂ ಇದ್ದರೆ ಅದು, ತಂತಾನೆ ವಿಸರ್ಜನೆಯಾಗುತ್ತದೆ.

Behardc

10. ಗ್ರಾಮ ಅರಣ್ಯ ಸಮಿತಿ (VFC) ಕಾರ್ಯನಿರ್ವಹಣಾ ಸಮಿತಿಯ ಪ್ರಕಾರ್ಯಗಳು

i ಕಾರ್ಯನಿರ್ವಹಣಾ ಸಮಿತಿಯ ಕಾಲಾವಧಿಯು 5 (ಐದು) ವರ್ಷಗಳಾಗಿರುತ್ತದೆ.

ii. ಕಾರ್ಯನಿರ್ವಹಣಾ ಸಮಿತಿಯ ಸಭೆಗಾಗಿ ಕೋರಂ, ಒಟ್ಟು ಸದಸ್ಯರ ಸಂಖ್ಯೆಯ, 1/3 ಕ್ಕಿಂತ ಕಡಿಮೆ ಇರಕೂಡದು, ಆದರೆ, ಅಧ್ಯಕ್ಷರು ಮತ್ತು ಕನಿಷ್ಠ ಒಬ್ಬರು ಮಹಿಳಾ ಸದಸ್ಯರೂ ಸೇರಿದಂತೆ 5 ಕ್ಕಿಂತ ಕಡಿಮೆ ಇರತಕ್ಕದ್ದಲ್ಲ.

iii. ಸಮಿತಿಯು ಕನಿಷ್ಠ ಪಕ್ಷ ಮೂರು ತಿಂಗಳಿಗೊಮ್ಮೆಯಾದರೂ ಸಭೆ ಸೇರಬೇಕು.

iv. ಕಾರ್ಯನಿರ್ವಹಣಾ ಸಮಿತಿಯ ಸದಸ್ಯರುಗಳಿಗೆ, ಸಂಬಂದಪಟ್ಟ ಅರಣ್ಯ ಅಧಿನಿಯಮ ಮತ್ತು ನಿಯಮಗಳ ಉಪಬಂಧಗಳಡಿಯಲ್ಲಿ, ಅರಣ್ಯ ಅಪರಾಧಿಗಳನ್ನು ಬಂಧಿಸುವ ಮತ್ತು ಅಂಥ ಅಪರಾಧಿಗಳ ವಿರುದ್ಧ ಮುಂದಿನ ಕ್ರಮ ತೆಗೆದುಕೊಳ್ಳಲು ಅವರನ್ನು ಅರಣ್ಯ ಅಧಿಕಾರಿಗಳಿಗೆ ಒಪ್ಪಿಸುವ ಅಧಿಕಾರಗಳಿರತಕ್ಕದ್ದು.

v. ಕಾರ್ಯನಿರ್ವಹಣಾ ಸಮಿತಿಯ ಸದಸ್ಯರು, ಅರಣ್ಯ ಒತ್ತುವರಿ, ಅಕ್ರಮ ಮರಕಡಿಯುವಿಕೆ, ಕಳ್ಳಸಾಗಾಣಿಕೆ, ಕಳ್ಳಬೇಟೆ ಮೊದಲಾದವುಗಳಲ್ಲಿ ತೊಡಗಿಕೊಂಡಿರುವಂಥವರನ್ನು ತಪಾಸಣೆ ಮಾಡುವ ಮತ್ತು ನಿರ್ಬಂಧಿಸುವ ಅಧಿಕಾರಗಳನ್ನು ಹೊಂದಿರುತ್ತಾರೆ.

vi. ಕಾರ್ಯನಿರ್ವಹಣಾ ಸಮಿತಿಯು, ಕ್ಷೇತ್ರ ವ್ಯಾಪ್ತಿಯ ಪ್ರದೇಶದೊಳಗೆ ದನಕರುಗಳ ದೊಡ್ಡಿಯನ್ನು ಅಧಿಸೂಚಿಸುವ ಮತ್ತು ಅನಧಿಕೃತ ಹುಲ್ಲು ಮೇಯಿಸುವುದಕ್ಕಾಗಿ ದನಕರುಗಳನ್ನು ದೊಡ್ಡಿಯಲ್ಲಿ ಕೂಡಿಹಾಕುವ ಅಧಿಕಾರಗಳನ್ನು ಹೊಂದಿರುತ್ತಾರೆ.

vii. ಕಾರ್ಯನಿರ್ವಹಣಾ ಸಮಿತಿಯು, ಈ ಸಂಬಂಧದಲ್ಲಿ ರಚಿಸುವ ಮತ್ತು ಅಧಿಸೂಚಿಸುವ ನಿಯಮಗಳಿಗನುಸಾರ, ಅನಧಿಕೃತ ಹುಲ್ಲು ಮೇಯಿಸುವುದಕ್ಕಾಗಿ ದಂಡವನ್ನು ವಿಧಿಸುವ ಅಧಿಕಾರಗಳನ್ನು ಹೊಂದಿರುತ್ತಾರೆ. ಹಾಗೆ ಸಂಗ್ರಹಿಸಲಾದ ದಂಡವನ್ನು ಗ್ರಾಮ ಅರಣ್ಯ ಅಭಿವೃದ್ಧಿ ನಿಧಿ (ವಿಎಫ್‌ಡಿಎಫ್)ಗೆ ಜಮಾ ಮಾಡತಕ್ಕದ್ದು. ಸದಸ್ಯ ಕಾರ್ಯದರ್ಶಿಯು, ಅಂತಹ ದಂಡಶುಲ್ಕಗಳ ಲೆಕ್ಕವನ್ನು ಸಮರ್ಪಕವಾಗಿ ನಿರ್ವಹಿಸತಕ್ಕದ್ದು.

viii. ಸದಸ್ಯ ಕಾರ್ಯದರ್ಶಿಯು, ಗ್ರಾಮ ಅರಣ್ಯ ಸಮಿತಿ ವಿಎಫ್‌ಡಿಎಫ್ ಮತ್ತು ವಿಡಿಎಫ್‌ಗಳ ನಗದು ಪುಸ್ತಕ ಹಾಗೂ ಇತರ ಲೆಕ್ಕಪತ್ರಗಳ ಜೊತೆಗೆ ಎಲ್ಲಾ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಿಸುವುದಕ್ಕೆ ಮುಖ್ಯವಾಗಿ ಹೊಣೆಗಾರನಾಗಿರತಕ್ಕದ್ದು. ದಾಖಲೆಗಳು, ನಗದು ಪುಸ್ತಕಗಳು ಮತ್ತು ಇತರೆ ಲೆಕ್ಕಪತ್ರಗಳನ್ನು ಸಮರ್ಪಕವಾಗಿ ನಿರ್ವಹಿಸಲಿಕ್ಕೆ ಹಾಗೂ ಇತರೆ ತತ್ಸಂಬಂಧಿ ಕೆಲಸಕಾರ್ಯಗಳ ನಿರ್ವಹಣೆಯಲ್ಲಿ ಸದಸ್ಯ ಕಾರ್ಯದರ್ಶಿಗೆ ನೆರವು ನೀಡಲು, ಗ್ರಾಮ ಅರಣ್ಯ ಸಮಿತಿಯು, ಸಂಪೂರ್ಣವಾಗಿ ಗೌರವ ಸಂಭಾವನೆ ಆಧಾರದ ಮೇಲೆ ಒಬ್ಬ ಗುಮಾಸ್ತ ಮತ್ತು ಒಬ್ಬ ದಲಾಯಿತನ ಸೇವೆಯನ್ನು ಒದಗಿಸಬಹುದು. ಕಾರ್ಯನಿರ್ವಹಣಾ ಸಮಿತಿಯು, ಪ್ರತಿ ವ್ಯಕ್ತಿಗೆ ಪ್ರತಿ ವರ್ಷಕ್ಕೆ 2000/- ರೂಪಾಯಿಗಳಿಗೆ ಮೀರದಂತೆ, ಗೌರವ ಸಂಭಾವನೆ ಆಧಾರದ ಮೇಲೆ ನೇಮಕಗೊಂಡ ನೌಕರರಿಗೆ ಗೌರವ ಸಂಭಾವನೆಯನ್ನು ಸಂದಾಯ ಮಾಡಬೇಕು.

ix. ಸದಸ್ಯ ಕಾರ್ಯದರ್ಶಿಯು, ವಿಎಫ್‌ಡಿಎಫ್ ಮತ್ತು ವಿಡಿಎಫ್‌ನ ಲೆಕ್ಕಪತ್ರಗಳನ್ನು ಸಿದ್ಧಪಡಿಸುವುದಕ್ಕೆ ಹಾಗೂ ನಿರ್ವಹಿಸುವುದಕ್ಕೆ ಸಂಪೂರ್ಣವಾಗಿ ಜವಾಬ್ದಾರನಾಗಿರತಕ್ಕದ್ದು. ವಿಎಫ್‌ಡಿಎಫ್ ಮತ್ತು ವಿಡಿಎಫ್‌ನ

| | | |
|---|---|---|
| | | ಲೆಕ್ಕಪತ್ರಗಳನ್ನು ವರ್ಷಕ್ಕೊಮ್ಮೆ ರಾಜ್ಯ ಲೆಕ್ಕಪತ್ರ ಇಲಾಖೆಯ ಮೂಲಕವಾಗಲೀ ಅಥವಾ ನೋಂದಾಯಿತ ಖಾಸಗಿ ಲೆಕ್ಕಪರಿಶೋಧಕರ (ಚಾಟರ್ಡ್ ಅಕೌಂಟೆಂಟ್) ಮೂಲಕವಾಗಲೀ ಲೆಕ್ಕಪರಿಶೋದನೆ ಮಾಡಿಸತಕ್ಕದ್ದು ಮತ್ತು ಅವುಗಳನ್ನು ವ್ಯವಸ್ಥಾಪನಾ ಸಮಿತಿಯು, ಹಣಕಾಸು ವರ್ಷ ಮುಕ್ತಾಯಗೊಂಡ 6 ತಿಂಗಳೊಳಗೆ ಗ್ರಾಮ ಅರಣ್ಯ ಸಮಿತಿ (ವಿಎಫ್‌ಸಿ)ಯ ಸಾಮಾನ್ಯ ಸಭೆಯ ಮುಂದೆ ಮಂಡಿಸತಕ್ಕದ್ದು ಹಾಗೂ ಲೆಕ್ಕಪರಿಶೋದನಾ ವರದಿಯ ಒಂದು ಪ್ರತಿಯನ್ನು ತದನಂತರ ಒಂದು ತಿಂಗಳೊಳಗೆ ಸಂಬಂಧಪಟ್ಟ ಆರ್.ಎಫ್.ಒ ಮತ್ತು ಡಿಸಿಎಫ್ ರವರಿಗೆ ಕಳುಹಿಸತಕ್ಕದ್ದು.<br><br>x. ವ್ಯವಸ್ಥಾಪನಾ ಸಮಿತಿ ಹಾಗೂ ಗ್ರಾಮ ಅರಣ್ಯ ಸಮಿತಿ (ವಿಎಫ್‌ಸಿ) ಕಾರ್ಯನಿರ್ವಹಣೆಗೆ ಸಂಬಂಧಿಸಿದ ಇತರ ವಿಧಿ ವಿಧಾನಗಳು, ಈ ಸಂಬಂಧದಲ್ಲಿ ರಾಜ್ಯ ಸರ್ಕಾರ ಅಥವಾ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯು (ಪಿಸಿಸಿಎಫ್) ಕಾಲಕಾಲಕ್ಕೆ ರಚಿಸುವ: ಹೊರಡಿಸುವ ನಿಯಮ: ನಿರ್ದೇಶನಗಳಿಗೆ ಒಳಪಡತಕ್ಕದ್ದು. |

ಸಂಖ್ಯೆ: ಅಪಜೀ 27 ಎಫ್‌ಟಿಎಸ್ 2024

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು